ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಉಪನಿರ್ದೇಶಕರ ಕಚೇರಿ, ವಾರ್ತಾಭವನ, ಧನ್ವಂತರಿ ರಸ್ತೆ, ಮೈಸೂರು-570001,
ದೂರವಾಣಿ:0821-2423251,
ಫ್ಯಾಕ್ಸ್0821-2423251 ಇ-ಮೇಲ್: mysorevarthabhavan@gmail.com
ಗ್ರೂಪ್ ವೆಬ್‌ಸೈಟ್: http://groups.google.com/group/mysorevarthabhavan

30ನೇ ನವೆಂಬರ್ 2017

# ಸರ್ಕಾರಿ ಸೇವೆ ಹೊಟ್ಟೆಪಾಡಿಗಲ್ಲ, ಜನರ ಸೇವೆಗಾಗಿ: ಸಿದ್ದರಾಮಯ್ಯ



ಮೈಸೂರು.ನ.30:- ಹೊಟ್ಟೆಪಾಡಿಗಾಗಿ ಸರ್ಕಾರಿ ಸೇವೆ ಆಯ್ಕೆ ಮಾಡಿಕೊಳ್ಳಬೇಕಾಗಿಲ್ಲ. ಹೊಟ್ಟೆಪಾಡಿಗಾಗಿ ಹಲವಾರು ಉದ್ಯೋಗಗಳಿವೆ. ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಜನರ ಸೇವೆ ಮುಖ್ಯವಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸರ್ಕಾರದ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕೆ.ಪಿ.ಎಸ್.ಸಿ. ಸ್ವಾಯತ್ತ ಸಂಸ್ಥೆ. ಆದರೆ ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಲೋಕಸೇವ ಆಯೋಗದ ಮೇಲೆ ಸಾಕಷ್ಟು ಟೀಕೆಗಳು, ಆರೋಪಗಳು ಬಂದಿವೆ.

ಯಾರು ಅರ್ಹರಿದ್ದಾರೆ ಅವರಿಗೆ ನ್ಯಾಯ ಸಿಗಬೇಕು, ಆಯ್ಕೆಯಾಗಬೇಕು. ಆದರೆ, ಅನೇಕ ಸಾರಿ ಇನಫ್ಲುಯೆನ್ಸ್ ನಿಂದ, ಹಣದ ಪ್ರಭಾವದಿಂದ ಯಾವ ಅರ್ಹತೆ ಸಿಗಬೇಕೋ ಅವು ಸಿಗದೇ ಹೋಗುವಂತಹ ಸನ್ನಿವೇಶಗಳು ಸಹ ಆಗುತ್ತವೆ. ಈ ವ್ಯವಸ್ತೆ ಸುಧಾರಣೆ ಮಾಡಲು ನಾವು ಅಧಿಕಾರಕ್ಕೆ ಬಂದಮೇಲೆ ಹೂಟ ಅವರ ನೇತೃತ್ವದ ಸಮಿತಿ ರಚಿಸಿದ್ದೆವು. ಅವರು ಕೊಟ್ಟ ವರದಿಯ ಬಹುತೇಕ ಅಂಶಗಳನ್ನು ಜಾರಿಗೆ ತಂದಿದ್ದೇವೆ. ಆ ಶಿಫಾರಸ್ಸು ಜಾರಿಗೊಂಡ ನಂತರ ಆಯ್ಕೆಯಾಗಿರುವ ಅಧಿಕಾರಿಗಳು ನೀವು ಎಂದರು.

ಹಿಂದೆ, ಪರೀಕ್ಷೆಯಲ್ಲಿ ಯಾರಿಗೆ ಎಷ್ಟು ಅಂಕ ಎಂದು ಗೊತ್ತಾಗುತ್ತಿತ್ತು. ಇದರಿಂದ ಸಂದರ್ಶನದಲ್ಲಿ ಪ್ರಭಾವ ಬೀರಿ, ಪ್ರಭಾವ, ಹಣ ಇದ್ದವರಿಗೆ ಗರಿಷ್ಠ ಅಂಕ, ಇಲ್ಲದವರಿಗೆ ಕಡಿಮೆ ಅಂಕ ಕೊಡಲಾಗುತ್ತಿತ್ತು. ಹಲವಾರು ಅಭ್ಯರ್ಥಿಗಳು ಈ ಬಗ್ಗೆ ಹೇಳಿದ್ದಾರೆ. ಈಗ ಹಾಗೆ ಆಗುವುದಿಲ್ಲ. ಕೆ.ಪಿ.ಎಸ್.ಸಿ. ಅಧ್ಯಕ್ಷರಿಗೂ ಅಭ್ಯರ್ಥಿಗಳ ಅಂಕದ ಬಗ್ಗೆ ಗೊತ್ತಾಗುವುದಿಲ್ಲ. ಹಿಂದೆ 45- 50 ಅಭ್ಯರ್ಥಿಗಳನ್ನು ಒಂದೇ ದಿನ ಸಂದರ್ಶನ ಮಾಡಲಾಗುತ್ತಿತ್ತು. ಈಗ ಒಂದು 8 ರಿಂದ 9 ಅಭ್ಯರ್ಥಿಗಳ ಸಂದರ್ಶನ ಆಗುತ್ತದೆ. ಐ.ಎ.ಎಸ್. ಅಧಿಕಾರಿಗಳು, ವಿಷಯ ತಜ್ಞರು ಸಂದರ್ಶನದಲ್ಲಿ ಇರುತ್ತಾರೆ ಎಂದರು.

ಈ ಕೆಲಸವನ್ನು ನೀವೆ ಆಯ್ಕೆ ಮಾಡಿಕೊಂಡಿದ್ದೀರಿ. ಇದೊಂದು ಸುವರ್ಣಾವಕಾಶ. ಈ ಕೆಲಸದ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಅಭಿವೃದ್ಧಿಗೆ ಸೇವೆ ಸಲ್ಲಿಸಿ.ಆ ಮೂಲಕ ಅವಕಾಶ ವಂಚಿತರಿಗೆ ಅವಕಾಶ ನೀಡಿ ಎಂದರು. ನಮ್ಮ ಸರ್ಕಾರ ಬಂದ ಮೇಲೆ ಇದು ಮೊದಲನೆ ತಂಡ. ಯಾವುದೇ ಲಂಚವಿಲ್ಲದೆ ತಯಾರಾಗಿರುವ ಅಧಿಕಾರಿಗಳು. ನಿಮ್ಮಿಂದ ಉತ್ತಮ ಕೆಲಸದ ನಿರೀಕ್ಷೆ ಹೊಂದಿದ್ದೇನೆ ಎಂದರು.

ಸರ್ಕಾರಿ ಕೆಲಸಕ್ಕೆ ಸುಮಾರು 30 ವರ್ಷ ಗ್ಯಾರೆಂಟಿ ಇದೆ. ರಾಜಕಾರಣಿಗಳಿಗೆ 5 ವರ್ಷ ಮಾತ್ರ. ನಿಮಗೆ ಒಮ್ಮೆ ಕೆಲಸ ಸಿಕ್ಕಿದ್ರೆ 30 ವರ್ಷ ಕೆಲಸ ಮಾಡಬಹುದು. ನಾವು 5 ವರ್ಷಕ್ಕೆ ರಿನಿವಲ್ ಮಾಡಿಕೊಳ್ಳಬೇಕು. ಹಾಗಾಗಿ ನೀವು ಈ ವೃತ್ತಿಯನ್ನ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸರ್ಕಾರಿ ಕೆಲಸ ಮಾಡಲು ಹೃದಯವಂತಿಕೆ ಇರಬೇಕು. ಜನರ ಸಮಸ್ಯೆಗಳನ್ನ ಅಲಿಸುವ ವ್ಯವಧಾನ ಇರಬೇಕು. ಮಾನವೀಯ ಮೌಲ್ಯಗಳೊಂದಿಗೆ ಕೆಲಸ ಮಾಡಿ. ಕಾನೂನನಿ ಅಡಿಯಲ್ಲಿ ಕೆಲಸ ಮಾಡುವವರಿಗೆ ಯಾರೂ ಬೇಡ ಅನ್ನೋಲ್ಲ.

ಇರೋ ಕಾನೂನನ್ನು ಬಳಸಿಕೊಂಡು ಬಡವರಿಗೆ ಸಹಾಯ ಮಾಡಬೇಕು. ಕಷ್ಟದಲ್ಲಿ ಇರುವವರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದರು.

ಯಾವುದೇ ಕೆಲಸ ಮಾಡಲು ಕಾಮನ್‌ಸೆನ್ಸ್ ಇರಬೇಕು. ಕೆಲವರು ಉತ್ತಮ ಅಂಕ ಪಡೆಯುತ್ತಾರೆ. ಆದ್ರೆ ಕೆಲಸದಲ್ಲಿ ಹಿಂದೆ ಇರ್ತಾರೆ. ನನ್ನ ಜೊತೆ ಲಾಯರ್ ತರಬೇತಿ ಪಡೆಯಲು ರ್‍ಯಾಂಕ್ ವಿದ್ಯಾರ್ಥಿಯೋಬ್ಬ ಬಂದಿದ್ದ. ನಾನು ಅವನಿಗಿಂತ ಕಡಿಮೆ ಅಂಕ ಪಡೆದಿದ್ದೆ. ಅವನಿಗಿಂತ ನನಗೆ ಸ್ವಲ್ಪ ಕಾಮನ್ ಸೆನ್ಸ್ ಜಾಸ್ತಿ ಇತ್ತು. ಹಾಗಾಗಿ ನಾನು ಸಕ್ಸಸ್‌ಫುಲ್ ಅಡ್ವಕೇಟ್ ಆದೆ ಎಂದರು.

ಜಾತಿ, ಧರ್ಮ, ಶ್ರೀಮಂತಿಕೆ, ಮತ್ತಾವುದರಿಂದಲೂ ಪ್ರತಿಭೆ ಬರೋಲ್ಲ. ಅದು ಎಲ್ಲರಲ್ಲು ಇರುತ್ತೆ. ಅವಕಾಶ ಸಿಕ್ಕಾಗ ಅದು ಹೊರಗೆ ಬರುತ್ತದೆ ಎಂದರು. ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ ಸಭಾಂಗಣದಲ್ಲಿ ನಡೆದ ಈ ಸಂವಾದದಲ್ಲಿ ತಹಸೀಲ್ದಾರ್, ಉಪ ವಿಭಾಗಾಧಿಕಾರಿ, ಕಾರ್ಯನಿರ್ವಾಹಣಾಧಿಕಾರಿ ಹಾಗೂ ಡಿವೈಎಸ್ಪಿ ಹುದ್ದೆಗೆ ಆಯ್ಕೆ ಆಗಿರುವ 230 ಅಭ್ಯರ್ಥಿಗಳು ಸಂವಾದದಲ್ಲಿ ಭಾಗವಹಿಸಿದ್ದರು.

## ಸಂವಾದದ ಪ್ರಮುಖ ಅಂಶಗಳು:

ಉಪವಿಭಾಗಾಧಿಕಾರಿ ಅಭ್ಯರ್ಥಿ ಐಶ್ವರ್ಯ:

ಉತ್ತಮ, ಸಧೃಡ ಸಾಮಾಜ ನಿರ್ಮಾಣಕ್ಕೆ ಅಧಿಕಾರಗಳ ಮತ್ತು ಜನಪ್ರತಿನಿದಿಗಳ ಸಂಬಂಧ ಹೇಗಿರಬೇಕು ಸರ್.

ಸಿ.ಎಂ: ಅಧಿಕಾರಿಗಳು ಸಹ ಜನರ ಸೇವೆಗಾಗಿ ಬಂದಿರುತ್ತಾರೆ. ಜನಪ್ರತಿನಿಧಿಗಳು ಸಹ ಜನರ ಆಶಯ ಮತ್ತು ಕಷ್ಟಗಳ ನಿವಾರಣೆಗಾಗಿ ಬಂದಿರುತ್ತೇವೆ. ಇಬ್ಬರೂ ಸಹ ಕಟ್ಟಕಡೆಯ ವ್ಯಕ್ತಿಯ ಕಷ್ಟ ಅರ್ಥಮಾಡಿಕೊಂಡು ಅದರ ನಿವಾರಣೆ ಶ್ರಮಿಸಬೇಕು.

ತಹಶೀಲ್ದಾರ್ ಅಭ್ಯರ್ಥಿ ವಿನಯ ಕುಮಾರ್ ಪಾಟೀಲ್:

ಸಮಾಜದಲ್ಲಿ ಉಂಟಾಗುವ ಸಂಘರ್ಷಗಳನ್ನು ಕಡಿಮೆ ಮಾಡುವ ಬಗ್ಗೆ ನಿಮ್ಮ ಸಲಹೆ ಸರ್.

ಸಿಎಂ: ಪ್ರಬಲರು ಮತ್ತು ದುರ್ಬಲರ ನಡುವೆ ಸಂಘರ್ಷ ಹಾಗೂ ಜಾತಿ ವ್ಯವಸ್ಥೆಯಲ್ಲಿ ಸಂಘರ್ಷ ಉಂಟಾಗುತ್ತದೆ. ಎಲ್ಲರಿಗೂ ಸಮಾನವಾದ ರಕ್ಷಣೆಕೊಡಬೇಕು. ಶ್ರೀಮಂತರು ಬಡವರು ಎಂದು ಭೇದ ಮಾಡಬಾರದು. ಇಬ್ಬರು ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು. ಆಗ ಸಂಘರ್ಷ ಅದಾಗೆ ಕಡಿಮೆಯಾಗುತ್ತದೆ.

ಡಿ.ವೈ.ಎಸ್.ಪಿ. ಅಭ್ಯರ್ಥಿ ಶಾಂತವೀರ: ನಮ್ಮಲ್ಲಿ ಇರುವ ಶಿಕ್ಷೆ ಪ್ರಮಾಣ ಕಡಿಮೆ ಇದೆ. ಇದರಿಂದ ತಪ್ಪುಗಳು ಜಾಸ್ತಿ ಆಗುತ್ತಿವೆ. ಇದಕ್ಕೆ ಪ್ರತ್ಯೇಕ ಅಪರಾಧ ತನಿಖಾ ವ್ಯವಸ್ಥೆ ಅವಶ್ಯಕತೆ ಇದೆಯಾ ಸರ್.

ಸಿ.ಎಂ : ಈಗಿನ ಕಾನೂನು ಏನು ಇದೆ. ಅದು ಸರಿ ಇದೆ. ಶಿಕ್ಷೆ ಸರಿಯಾಗಿ ಆಗದಿದ್ದಲ್ಲಿ ಶೇ 50 ತನಿಖೆ, ಶೇ 25 ರಷ್ಟು ಸಾಕ್ಷ್ಯದ ಕೊರತೆ ಹಾಗೂ ಶೇ 25 ರಷ್ಟು ವಕೀಲರ ಬುದ್ಧಿವಂತಿಕೆ ಇರುತ್ತದೆ.

ಪಂಚಾಯತ್ ರಾಜ್ ಇಲಾಖೆ ಇ.ಒ. ಅಭ್ಯರ್ಥಿ ಬಿಂದು: ಬಹಳಷ್ಟು ದುಃಖಗಳು ಇದ್ದಂತಹ ಸನ್ನಿವೇಶದಲ್ಲೂ ನೀವು ಕೆಲಸ ನಿರ್ವಹಿಸಿದ್ದೀರಿ. ಹೇಗೆ ಸಾಧ್ಯವಾಯಿತು ಸರ್.

ಸಿ.ಎಂ. ಸಮಚಿತ್ತ ಮನೋಭಾವ ಇರಬೇಕು. ಸುಖ ಮತ್ತು ದುಃಖಾನ ಸಮಾನವಾಗಿ ಸ್ವೀಕರಿಸಿ, ಆತ್ಮ ಸ್ಥೈರ್ಯ ಬೆಳಸಿಕೊಳ್ಳಬೇಕು. ಆಗ ಎಂತಹ ಪರಿಸ್ಥಿತಿಯಲ್ಲೂ ಕೆಲಸದಲ್ಲಿ ತೊಡಗಲು ಸಾಧ್ಯವಾಗುತ್ತದೆ.

********